ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01.**

ಸಂಖ್ಯೆ:ಸಿ7[3]ಪ್ರಾಶಿಅ:ಶಾಲಾ.ಮಾನ್ಯತೆ:40:2020-21 ದಿನಾಂಕ:15ನೇ ಫೆಬ್ರವರಿ 2022

**: ಸುತ್ತೋಲೆ :**

ವಿಷಯ: ಖಾಸಗಿ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣ ದಿನಾಂಕವನ್ನು 28-02-2022ರ ವರಗೆ ವಿಸ್ತರಣೆ ಮಾಡಿರುವಬಗ್ಗೆ

ಉಲ್ಲೇಖ: ಕರ್ನಾಟಕ ಶಿಕ್ಷಣ ಕಾಯ್ದೆ-1983. ಸೆಕ್ಷನ್-36

2] ಕರ್ನಾಟಕ ಶಿಕ್ಷಣ ಕಾಯ್ದೆ [ಖಾಸಗಿ ಶಾಲೆಗಳ ನೊಂದಣಿ ಮತ್ತು ನಿಯಂತ್ರಣ] ನಿಯಮ-1999 ಸರ್ಕಾರದ ಅಧಿಸೂಚನೆ ಸಂ:ಇಡಿ:137:ವಿವಿಧ:98, ದಿ:19.05.1999

3] ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕು ಕಾಯ್ದೆ-2009.

4] ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕು ನಿಯಮಗಳು-2012.

5] ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ[ಸಿವಿಲ್] ಸಂಖ್ಯೆ:483/2004ರ ತೀರ್ಪು ದಿನಾಂಕ:13.04.2009.

6] ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ:369:ಪಿಜಿಸಿ:2014, ದಿನಾಂಕ:11.11.2014.

7] ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂ.ವ್ಯ.ಶಾ.ಇ.21.ಶಾಸನ.2017, ದಿ:22.04.2017 ಕರ್ನಾಟಕ ಶಿಕ್ಷಣ ಕಾಯ್ದೆ- [2ನೇ ಕಾಯ್ದೆಗಳ ತಿದ್ದುಪಡಿ]

8] ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ:709:ಪಿಜಿಸಿ:2017, ದಿನಾಂಕ:08.03.2018 [ಅಧಿಸೂಚನೆ-1] ಮತ್ತು ದಿನಾಂಕ:07.03.2018 [ಅಧಿಸೂಚನೆ-2 ಮತ್ತು 3]

9] ಸರ್ಕಾರದ ಆದೇಶ ಸಂಖ್ಯೆ:ಇಡಿ:587:ಪಿಜಿಸಿ:2018, ದಿನಾಂಕ:19.11.2018

10] ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ7[2]ಪ್ರಾಶಿಅ.ಮಾನ್ಯತೆ ಷರತ್ತು:23:2018-19, ದಿನಾಂಕ:30.11.2018.

11] ಈ ಕಛೇರಿ ಜ್ಞಾಪನಾ ಸಂಖ್ಯೆ:ಸಿ7[3]ಪ್ರಾಶಿಅ:ಖಾ.ಶಾ.ಮಾ.ನ:01:2021-22, ದಿನಾಂಕ:04.08.2021.

12] ಈ ಕಛೇರಿ ಸುತ್ತೋಲೆ ಸಂಖ್ಯೆಸಿ7[3]ಪ್ರಾಶಿಅ:ಖಾ.ಶಾ.ಮಾ.ನ:01:2021-22 ದಿನಾಂಕ:02-12-2021, ದಿನಾಂಕ:11.12.2021 ದಿನಾಂಕ:28.12.2021, ಮತ್ತು ದಿನಾಂಕ:27-1-2022.

13] ಈ ಕಛೇರಿ ಸುತ್ತೋಲೆ ಸುತ್ತೋಲೆ ಸಂಖ್ಯೆ:ಸಿ7(2)ಪ್ರಾಶಿಅ/ಡೈಸ್ ವಿಲೀನ/06/2020-21, ದಿನಾಂಕ:07-02-2022.

ಮೇಲಿನ ವಿಷಯ ಹಾಗೂ ಉಲ್ಲೇಖದ ಪತ್ರಗಳಂತೆ ಖಾಸಗಿ ಅನುದಾನಿತ / ಅನುದಾನ ರಹಿತ ಶಾಲೆಗಳಲ್ಲಿ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದ ಪ್ರಾಧಿಕಾರಿಗಳು ಸಂಬಂಧಿಸಿದ ಶಾಲೆಗಳ ಮಾನ್ಯತೆ ನವೀಕರಣ ನೀಡಬೇಕಿರುತ್ತದೆ. ಉಲ್ಲೇಖ [11]ರಲ್ಲಿ ಖಾಸಗಿ ಶಾಲೆಗಳು ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣವನ್ನು ಇಲಾಖೆಯು ಪರಿಷ್ಕರಿಸಿ ತಂತ್ರಾಂಶದ ಮೂಲಕವೇ ನವೀಕರಿಸಲು ತಿಳಿಸಿ ಜ್ಞಾಪನವನ್ನು ನೀಡಲಾಗಿತ್ತು. ಅದರಂತೆ, ತಂತ್ರಾಂಶವನ್ನು ಅಭಿವೃದ್ಧಿಪಡಿಸಿ, ಉಲ್ಲೇಖ-12 ರಲ್ಲಿ ಬಿಡುಗಡೆಗೊಳಿಸಲಾಗಿದೆ.

ಹೊಸದಾಗಿ ತಂತ್ರಂಶವನ್ನು ಅಭಿವೃದ್ಧಿಪಡಿಸಿರುವುದರಿಂದ ತಂತ್ರಾಂಶದಲ್ಲಿ ಮಾಹಿತಿ/ದಾಖಲೆಗಳನ್ನು ಸಲ್ಲಿಸಲು ವಿಳಂಬವಾಗುತ್ತಿದ್ದು ಈ ಬಗ್ಗೆ ಶಾಲೆಯ ಆಡಳಿತ ಮಂಡಳಿಗಳು ಮತ್ತು ಇಲಾಖಾಧಿಕಾರಿಗಳು

ವಿಡಿಯೋ ಕಾನ್ಫರೆನ್ಸ ಸಭೆಯಲ್ಲಿ ಅರ್ಜಿಸಲ್ಲಿಸುವ ದಿನಾಂಕವನ್ನು ವಿಸ್ತರಣೆ ಮಾಡುವಂತೆ ಕೋರಿರುವ ಹಿನ್ನೆಲೆಯಲ್ಲಿ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ, ಆಡಳಿತ ಮಂಡಳಿಗಳು 2020-21 ಮತ್ತು 2021-22ನೇ ಸಾಲಿನಲ್ಲಿ ನೊಂದಣಿಯಾದ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ 2021-22ನೇಸಾಲಿನ ಮಾನ್ಯತೆ ನವೀಕರಣಕ್ಕೆ ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಈ ಹಿಂದೆ ನಿಗಧಿಪಡಿಸಲಾಗಿದ್ದ **ದಿನಾಂಕ:15-2-2022ನ್ನು ದಿನಾಂಕ:28.02.2022ರವರೆಗೆ ವಿಸ್ತರಿಸಿದೆ.** ಉಳಿದಂತೆ ಉಲ್ಲೇಖ 11 ಮತ್ತು 12ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳು ಯಥಾ ರೀತಿ ಮುಂದುವರೆಯುತ್ತವೆ. ಆಡಳಿತ ಮಂಡಳಿಗಳಿಂದ ಯಾವುದೇ ರೀತಿಯ ಭೌತಿಕ ದಾಖಲೆಗಳನ್ನು ಸ್ವೀಕರಿಸುವುದನ್ನು ನಿರ್ಭಂದಿಸಿದೆ.

ಈಗಾಗಲೇ ತಂತ್ರಾಂಶದ ಬಗ್ಗೆ ವಿಡಿಯೋ ಸಂವಾದದ ಮುಖಾಂತರ ತರಬೇತಿ ನೀಡಿದ್ದು ಅದರಂತೆ ವಿಳಂಬ ಅಥವಾ ಅನಾವಶ್ಯಕ ಗೊಂದಲಗಳಿಗೆ ಅವಕಾಶ ನೀಡದೆ ಕರ್ತವ್ಯ ನಿರ್ವಹಿಸುವುದು. ಒಂದುವೇಳೆ ತಾಂತ್ರಿಕವಾಗಿ ಯಾವುದೇ ಅಡಚಣೆ / ಸಮಸ್ಯೆಗಳಿದ್ದಲ್ಲಿ ಕೆಳಕಂಡ ವಿಳಾಸದ ತಾಂತ್ರಿಕ / ಆಡಳಿತಾತ್ಮಕ ವಿಭಾಗವನ್ನು ಸಂಪರ್ಕಿಸಿ ಸಲಹೆ ಪಡೆದು ನಿಗಧಿಪಡಿಸಿದ ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ಸೂಚಿಸಿದೆ.

ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಹಾಗೂ ಆರ್.ಟಿ.ಇ ಶುಲ್ಕ ಮರುಪಾವತಿಗೆ ವಿಳಂಭವಾಗದಂತೆ ಈಗಾಗಲೇ ಸಲ್ಲಿಸಿರುವ ಮತ್ತು ಸಲ್ಲಿಸುತ್ತಿರುವ ಅರ್ಜಿಗಳನ್ನು ಆಗ್ಗಿಂದಾಗ್ಗೆ ಪರಿಶೀಲಿಸಿ ನಿಯಮಾನುಸಾರ ಅನುಮೋದಿಸಿ ಆಧ್ಯತೆಯ ಮೇಲೆ ಕ್ರಮ ಕೈಗೊಳ್ಳುವುದು. ಯಾವುದೇ ಕಾರಣಕ್ಕೂ ಕಡೆಯ ದಿನಾಂಕದವರೆಗೂ ಕಾಯಭಾರದೆಂದು ಸೂಚಿಸಿದೆ ಹಾಗೂ ಒಂದೇ ಆವರಣದಲ್ಲಿನ ಶಾಲೆಗಳ ವಿಲೀನ ಪ್ರಕ್ರಿಯೆಗೆ ಸಂಬಂಧಿಸದಂತೆ ಉಲ್ಲೇಖ(13)ರ ಸುತ್ತೋಲೆಯಂತೆ ಕ್ರಮವಹಿಸಲು ತಿಳಿಸಿದೆ.

15/02/2022.

**ಆಯುಕ್ತರು.**
**ಸಾರ್ವಜನಿಕ ಶಿಕ್ಷಣ ಇಲಾಖೆ.**

*ಇವರಿಗೆ:*

01 ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರ್ಗಿ ವಿಭಾಗ.
02 ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
03 ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
04 ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
05 ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ. [ಇವರು ಎಲ್ಲಾ ಖಾಸಗಿ ಅನುದಾನರಹಿತ ಆಡಳಿತ ಮಂಡಳಿ ಹಾಗೂ ಅನುದಾನರಹಿತ ಶಾಲಾ ಮುಖ್ಯಸ್ಥರುಗಳಿಗೆ ಸುತ್ತೋಲೆಯನ್ನು ತಲುಪಿಸುವುದು]

***ಪ್ರತಿಯನ್ನು ಮಾಹಿತಿಗಾಗಿ.***

01 ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಸದರಿ ವಿಷಯವನ್ನು ಮಾನ್ಯ ಸಚಿವರ ಅವಗಾಹನೆಗೆ ತರುವಂತೆ ಕೋರಿದೆ.
02 ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು.
03 ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
04 ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.
05 ಕಛೇರಿ ಪ್ರತಿ.